

ವಿಮಾನ ರನ್ ವೇ ಮೇಲೆ ಓಡಲು ಪ್ರಾರಂಭಿಸಿತು. ರೀನಾ ಮೆಲ್ಲನೆ ದಿಶಾಳ ಕಿವಿಯಲ್ಲಿ, 'ಸಿದ್ಧಳಾಗು, ಇವತ್ತು ಪ್ರಯಾಣಿಕರಿಗೆ ನೀನೇ ಸೇಫ್ಟಿ ಇನ್ ಸ್ಟ್ರಕ್ಷನ್ ಕೊಡಬೇಕು' ಎಂದಳು. ದಿಶಾಳ ಮುಖ ಚಿಕ್ಕದಾಯಿತು. 'ಅದೇಕೋ ರೀನಾ, ಅದೊಂದು ಕೆಲಸ ನನ್ನಿಂದಾಗಲ್ಲ ನೋಡು....ಪ್ರಯಾಣಿಕರು ಹೇಗೆ ನೋಡುತ್ತಿರುತ್ತಾರೆ. ಗೊಂಬೆಗೆ ಕೀಲಿ ಕೊಟ್ಟ ಹಾಗೆ ನಾನು ನಟಿಸಬೇಕು...ಅಷ್ಟು ಸಣ್ಣ ಅಂತರದಲ್ಲಿ, ಪ್ರಯಾಣಿಕರ ನಡುವೆಯೇ ನಿಂತು ಹಾವಭಾವ ಮಾಡುವುದು ಎಂದರೆ ಹಿಂಸೆಯಾಗುತ್ತದೆ...ತುಂಬಾ ಸಂಕೋಚವಾಗುತ್ತದೆ' ಎಂದಳು.

'ಏನೂ ಮಾಡಲಾಗದು ದಿಶಾ, ಗಗನಸಖಿಯರು ನಾವು! ಸಖಿ ಎಂದರೆ ಅರ್ಥ ಗೊತ್ತಲ್ಲ...ನಮ್ಮನ್ನು ಗೆಳತಿ ಎಂದು ಭಾವಿಸುವುದಕ್ಕಿಂತ ಸೇವಕಿ ಎಂದೇ ಭಾವಿಸುತ್ತಾರೆ...ನೀನು ಹೊಸದಾಗಿ ಬಂದಿರುವುದರಿಂದ ಸಂಕೋಚವಾಗುತ್ತಿರಬಹುದು. ಮುಂದೆ ಹೋದಂತೆ ಎಲ್ಲವೂ ಯಾಂತ್ರಿಕವೆನ್ನಿಸುತ್ತದೆ. ನಿನ್ನ ಪಾಡಿಗೆ ನೀನು ರೊಬಾಟ್ ಹಾಗೆ ಕೆಲಸ ಮಾಡ್ತೀಯ...ಧೈರ್ಯವಾಗಿ ಮಾಡು...ಆಲ್ ದಿ ಬೆಸ್ಟ್' ರೀನಾ ಭರವಸೆ ನೀಡಿದಳು.

ವಿಮಾನ ಮೇಲೇರತೊಡಗಿದಂತೆ ದಿಶಾ ಪ್ರಯಾಣಿಕರ ಮುಂದೆ ಬಂದು ನಿಂತಳು. ಒಳಗೆ ಜೀವ ತತ್ತರಿಸಿಹೋಗಿದ್ದರೂ, ಮೊಗದ ಮೇಲೆ ತಿಳಿನಗುವೊಂದು ಹಾರಾಡುವಂತೆ ನಟಿಸಲೇ ಬೇಕಿತ್ತು. ತರಬೇತಿಯಲ್ಲಿ ಅದನ್ನೇ ಕಡ್ಡಾಯವಾಗಿ ಹೇಳಿಕೊಟ್ಟಿದ್ದರು. ಕ್ಯಾಪ್ಟನ್ ರವೀಂದ್ರ ಸರ್ 'ಯಾವುದು ಏನೇ ಇರಲಿ...ಗಗನಸಖಿ ಆಗಬೇಕೆಂದರೆ ಮೊಟ್ಟಮೊದಲು ಕಲಿಯಬೇಕಾದ್ದು ತಾಳ್ಮೆ! ಅದೊಂದನ್ನು ಕಲಿತುಬಿಟ್ಟರೆ ಅರ್ಧ ಕೋರ್ಸ್ ಪೂರೈಸಿದ ಹಾಗೆ. ಉಳಿದವುಗಳೆಲ್ಲಾ ಇನ್ನರ್ಧ ಕೋರ್ಸ್ ನಲ್ಲಿ ಬರುತ್ತದೆ' ಎಂದಿದ್ದರು. ಅವರು ಹೇಳಿದ ಮಾತನ್ನು ದಿಶಾ ಸದಾ ನೆನಪಿಸಿಕೊಳ್ಳುತ್ತಿದ್ದಳು. ರವೀಂದ್ರ ಸರ್ ಹೇಳುತ್ತಿದ್ದ ರೀತಿ ನೆನೆದಾಗ ಕಂಡೂ ಕಾಣದಂತೆ ನಿಜವಾದ ಮುಗುಳ್ನಗೆ ಮೂಡಿತು. ಅದೇ ನಗೆಯೊಂದಿಗೆ ಸೂಚನೆ ನೀಡಲು ಪ್ರಾರಂಭಿಸಿದಳು.

'ಲೇಡೀಸ್ ಅಂಡ್ ಜೆಂಟಲ್ ಮನ್, ಐ ಯಾಂ ದಿಶಾ...ಐ ಯಾಂ ಯುವರ್ ಚೀಫ್ ಫ್ಲೈಟ್ ಅಟೆನ್ಡೆಂಟ್....' ಎಂದು ಹೇಳುತ್ತಾ ಬೆಲ್ಟ್ ಹಾಕುವುದರಿಂದ ಹಿಡಿದು ವಿಮಾನ ಎಷ್ಟು ವೇಗದಲ್ಲಿ ಹಾರುತ್ತಿದೆ, ಎಷ್ಟು ಅಡಿ ಎತ್ತರದಲ್ಲಿದೆ, ಅಪಾಯವಾದಾಗ ಏನು ಮಾಡಬೇಕು....ಎಂಬುದೆಲ್ಲವನ್ನೂ ಪಟಪಟನೆ ಉಲಿದಳು. ಕೈಗಳನ್ನು ಮೇಲೆತ್ತಿ ಇಳಿಸುತ್ತಾ, ಹಿಂದೆ ಮುಂದೆ ಆಡಿಸುತ್ತಾ ವಿವರಿಸುತ್ತಿದ್ದರೆ ಫೇಟ್ ಡ್ರಿಲ್ ಮಾಡಿದ ಹಾಗೆ ಭಾಸವಾಗುತ್ತಿದ್ದಿತು. ಹತ್ತಿರದಲ್ಲೇ ಕುಳಿತಿದ್ದ ಯುವಕ ಅವಳನ್ನೇ ತಿಂದು ಬಿಡುವಂತೆ ನೋಡುತ್ತಿದ್ದ. ಅದೇ ರೀತಿ ಇನ್ನೆಷ್ಟು ಕಂಗಳು ದಿಟ್ಟಿಸುತ್ತಿದ್ದವೋ ಗೊತ್ತಿಲ್ಲ. ದಿಶಾ ನಿರ್ಲಿಪ್ತಳಾಗಿ ಗಿಳಿಪಾಠವನ್ನು ಒಪ್ಪಿಸಿದಳು. ಸೂಚನೆಗಳನ್ನು ಪೂರ್ತಿಯಾಗಿ ಹೇಳಿದ ಮೇಲೆ ಸ್ಟಾಫ್ ಕಂಪಾರ್ಟ್ ಮೆಂಟ್ ಗೆ ವೇಗವಾಗಿ ಹೋದಳು. ಒಳಗೆ ಗ್ರೀನ್ ಟೀ ಕುಡಿಯುತ್ತಿದ್ದ ರೀನಾ, 'ವೆಲ್ ಡನ್ ದಿಶಾ...,ಹೆದರಿಕೆಯಿದ್ದಾಗಲೇ ಇಷ್ಟು ಚೆನ್ನಾಗಿ ಹೇಳಿದೆ. ಅನುಭವ ಆಗುತ್ತಿದ್ದ ಹಾಗೆ ಇನ್ನೂ ಚೆನ್ನಾಗಿ ನಿಭಾಯಿಸುತ್ತೀಯಾ...' ಎಂದು ಮೆಚ್ಚುಗೆ ಸೂಚಿಸಿದಳು. ಆ ಮಾತಿಗೆ ದಿಶಾ ಪೆಚ್ಚು ನಗೆ ಬೀರಿ, ಏನೋ ನಿಭಾಯಿಸಿದೆ...ಅಲ್ಲೊಬ್ಬ ಮುದುಕ ನುಂಗುವಂತೆ ನೋಡುತ್ತಿದ್ದ. ಎಷ್ಟು ಇರಿಟೇಟ್ ಆಗುತ್ತಿತ್ತು. ಆದರೂ ಹೇಳಿ ಮುಗಿಸಿದೆ. ಯಾವಾಗಲೂ ಯಾರ ಮುಂದಾದರೂ ಸಂಕೋಚವಾದರೆ ಭೂಮಿ ಬಾಯ್ಬಿಟ್ಟು ನುಂಗಬಾರದೆ ಎಂದುಕೊಳ್ಳುತ್ತಿದ್ದೆ. 'ಪದಕುಸಿಯೇ ನೆಲವಿಹುದು' ಎಂದು ಹೇಳಿಕೊಳ್ಳುತ್ತಿದ್ದೆ. ಇಲ್ಲಿ ಅದೂ ಹೇಳಿಕೊಳ್ಳುವಂತಿಲ್ಲ ನೋಡು. ಆಗಸದ ಮೇಲೆ ಹಾರಾಡುತ್ತಿರುವ ವಿಮಾನದ ತಳ ಬಿರಿದರೆ ಏನಾಗಬಹುದೆಂದು ಊಹಿಸುವುದಕ್ಕೂ ಭಯವಾಗುತ್ತೆ...' ಎಂದಳು.

ರೀನಾ ಜೋರಾಗಿ ನಕ್ಕು, 'ಎಲ್ಲಾ ಸ್ವಲ್ಪಕಾಲ ಅಷ್ಟೇ...ಆಮೇಲೆ ಇದೇ ರೂಢಿಯಾಗುತ್ತೆ...ನಿದ್ದೆಯಲ್ಲೂ ಲೇಡೀಸ್ ಅಂಡ್ ಜಂಟಲ್ ಮನ್....ಅಂತ ಹೇಳ್ತೀಯಾ...' ತಮಾಷೆ ಮಾಡಿದಳು. ಅಷ್ಟು ಹೊತ್ತಿಗೆ ಅತುಲ್ ಬಂದು 'ಹೀಗೆ ನಗ್ತಾ ಇರ್ತೀರೋ ಅಥವಾ ಊಟಕ್ಕೆ ರೆಡಿ ಮಾಡ್ತೀರೋ...ಇದು ಜರ್ಮನಿಗೆ ಹೋಗುವ ವಿಮಾನ. ತುಂಬಾ ಲಾಂಗ್ ಜರ್ನಿ...ನೆನಪಿರಲಿ' ಎಂದು ಎಚ್ಚರಿಕೆ ಕೊಟ್ಟ. 'ನಮಗೂ ಗೊತ್ತಪ್ಪಾ...ಚಿಂತೆ ಬಿಡು ನಾವೆಲ್ಲಾ ಮಾಡ್ತೇವೆ' ಎನ್ನುತ್ತಾ ರೀನಾ ಆಹಾರದ ಪೊಟ್ಟಣಗಳನ್ನು ಫ್ರೀಜರ್ ನಿಂದ ತೆಗೆದು ಮೈಕ್ರೋವೇವ್ ನಲ್ಲಿ ಬಿಸಿ ಮಾಡಲು ಇಡತೊಡಗಿದಳು. ದಿಶಾ ಟ್ರೇಗಳನ್ನು ಜೋಡಿಸತೊಡಗಿದಳು. ಉಳಿದ ಸಖಿಯರೂ ಬಂದು ತಮ್ಮ ತಮ್ಮ ಕೆಲಸಗಳನ್ನು ಮಾಡತೊಡಗಿದರು.

ದಿಶಾ ಮತ್ತು ರೀನಾ ಟ್ರಾಲಿ ತಳ್ಳಿಕೊಂಡು ಬರುತ್ತಾ ಒಬ್ಬೊಬ್ಬರಿಗೇ ಊಟದ ಟ್ರೇಗಳನ್ನು ನೀಡುತ್ತಾ ಬಂದರು. ಮಧ್ಯಭಾಗಕ್ಕೆ ಬಂದಾಗ ಒಂದಷ್ಟು ವಯಸ್ಕರು ಪರಸ್ಪರ ಏನೋ ಜೋಕ್ಸ್ ಮಾಡುತ್ತಾ ಜೋರಾಗಿ ಮಾತನಾಡುತ್ತಿದ್ದರು. ದಿಶಾ ಮತ್ತು ರೀನಾ ರೊಬಾಟ್ ಗಳಂತೆ ತಮ್ಮ ಪಾಡಿಗೆ ಕೆಲಸ ಮಾಡುತ್ತಿದ್ದರು. ಈ ಗಗನಸಖಿಯರಿಗೆ ಕನ್ನಡ ಬರುವುದಿಲ್ಲ ಎಂದುಕೊಂಡ ಅವರು ಸಲೀಸಾಗಿ ಮಾತನಾಡತೊಡಗಿದರು. 'ನೋಡೋ, ಹೇಗೆ ಗೊಂಬೆ ಹಾಗಿದ್ದಾಳೆ....' ಎಂದ. ಇನ್ನೊಬ್ಬ 'ಅಯ್ಯೋ..., ಮೊದಲೆಲ್ಲಾ ಗಗನಸಖಿ ಎಂದರೆ ಸಾಕು ಅಪ್ಸರೆಯೇನೋ ಎಂಬಂತೆ ನೋಡ್ತಾ ಇದ್ವಿ. ಈಗ ನೋಡು, ತಿಂಗಳಿಗೊಮ್ಮೆ ವಿಮಾನದಲ್ಲಿ ಓಡಾಡ್ತೀವಿ...ಏನೂ ಥ್ರಿಲ್ ಅನ್ನಿಸೋಲ್ಲ.. ಬೇರೆಯವರು ಭೂಮಿಯ ಮೇಲೆ ಕೆಲಸ ಮಾಡ್ತಾರೆ, ಇವು ಗಗನದಲ್ಲಿ ಕೆಲಸ ಮಾಡ್ತಾವೆ...ಅಷ್ಟೇ ವ್ಯತ್ಯಾಸ!' ಎಂದ. ಅವನ ಮಾತಿಗೆ ಉಳಿದವರು ಗೊಳ್ಳೆಂದು ನಕ್ಕರು. ದಿಶಾ ರೀನಾಳ ಮುಖ ನೋಡಿದಳು. ರೀನಾ ಕಣ್ಣುಗಳಲ್ಲೇ ಸಮಾಧಾನ ಹೇಳಿದಳು. ಊಟ ಕೊಟ್ಟು ಮುಗಿಸಿ ಒಳಗೆ ಹೋದ ಮೇಲೆ, ದಿಶಾ, 'ಅಲ್ಲಾ ರೀನಾ, ಅವರು ಹಾಗೆ ಮಾತನಾಡುತ್ತಿದ್ದರೂ ನಾವು ಸುಮ್ಮನಿರಬೇಕಲ್ಲ!...ಬೇರೆಲ್ಲೇ ಆಗಲಿ, ಯಾವುದೇ ಹುಡುಗಿಯಾದರೂ ಪ್ರತಿಭಟಿಸುವ ಹಕ್ಕು ಇರುತ್ತದೆ. ಯಾರಾದರೂ ಚುಡಾಯಿಸಿದರೆ ತಿರುಗಿಸಿ ಅನ್ನುವ ಸ್ವಾತಂತ್ರ್ಯವಾದರೂ ಇರುತ್ತದೆ. ಇದೇನು... ಗಗನಸಖಿ ಮಾತ್ರ ಎಲ್ಲವನ್ನೂ ಸೈರಿಸಿಕೊಂಡು ಹೋಗಬೇಕಾ?...ನಾವು ಸುಮ್ಮ ಸುಮ್ಮನೆ ಪ್ರಯಾಣಿಕರ ಬಳಿ ರೂಡ್ ಆಗಿ ನಡೆದುಕೊಳ್ಳಬಾರದು. ಆದರೆ ಅವರು ನಮಗೆ ಕೆಟ್ಟದಾಗಿ ಅಂದಾಗಲೂ ಸಹ ಸುಮ್ನೆ ಅನ್ನಿಸಿಕೊಳ್ಳಬೇಕೇ...ನಮ್ಮ ಕನ್ನಡದವರು ಇಷ್ಟು ಕೀಳಾಗಿ ಮಾತನಾಡಬಹುದೇ?' ಎಂದಳು ದುಮುಗುಡುತ್ತ.

ಅದನ್ನು ಕೇಳಿ, ಇನ್ನೊಬ್ಬ ಗಗನಸಖಿ ನೀತಾ 'ಅಯ್ಯೋ...ಎಲ್ಲಾ ಭಾಷೆಯ ಜನರೂ ಅಷ್ಟೇ...ನಮ್ಮ ಮರಾಠಿಯವರೂ ಕಡಿಮೆಯಿಲ್ಲ...ಅವರೂ ಹೀಗೇ ಚುಡಾಯಿಸ್ತಾರೆ...ನನಗೆ ಅರ್ಥವಾದರೂ ಅರ್ಥವಾಗದ ಹಾಗೆ ಇದ್ದುಬಿಡ್ತೇನೆ' ಎಂದಳು. ರೀನಾ ಸಹ 'ಏನು ಮಾಡೋದು ಹೇಳು....ನನಗೂ ಮೊದಮೊದಲು ಹೀಗೇ ಅನ್ನಿಸ್ತಿತ್ತು. ಒಮ್ಮೆ ಹೈದರಾಬಾದ್ ಹುಡುಗನೊಬ್ಬ ನನಗೆ ತೆಲುಗು ಬರುವುದು ಗೊತ್ತಿಲ್ಲದೆ 'ಏಮೇ ಪಿಲ್ಲ, ಲೇಚಿ ಪೋದ್ದಾಮ್ಮ?' ಎಂದು ಕೇಳಿದ. ಅವನ ಜೊತೆಯಲ್ಲಿರುವವರು ಏನೋ ದೊಡ್ಡ ಜೋಕ್ ಕೇಳಿದವರಂತೆ ಮುಸಿ ಮುಸಿ ನಕ್ಕರು. ನಾನಾಗ ಅವರಿಗೆ ಡ್ರಿಂಕ್ಸ್ ಕೊಡುತ್ತಿದ್ದೆ. ಎಷ್ಟು ಸುಮ್ಮನಿರಬೇಕೆಂದರೂ ನಿಯಂತ್ರಿಸಿಕೊಳ್ಳಲು ಆಗಲಿಲ್ಲ. 'ಸರೇರಾ...ನೇನು ರೆಡಿ. ನುವ್ವು ಇಪ್ಪುಡೇ ವಿಮಾನನಿಂಚಿ ಬಯಲ್ದೇರತೆ, ನೇನು